ದಿಃ 21.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಕೆ. ಎಸ್. ಆರ್ ರವರಿಂದ**

ಸ. ನಂ. 45/1 ರಲ್ಲಿ 1 ರಿಂದ 6 ನೇ ಪ್ರತಿವಾದಿ ತಂದೆಗೆ 9 ವರೆ ಗುಂಟೆ ಇದೆ. 1 ನೇ ವಾದಿಗೆ ಮತ್ತು ನಮ್ಮ ತಂದೆಯ ಹೆಸರಿನಲ್ಲಿ ತಲಾ 9 ವರೆ ಗುಂಟೆ ಇದೆ. ಉಳಿಕೆ ಕರಾಬಿನಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ. ಸದರಿ ಸ್ವತ್ತು ಮೊದಲು ಸುಬ್ಬಕ್ಕ ರವರಿಗೆ ಸೇರಿದ್ದು. ನಮ್ಮ ವಂಶದ ಹೆಸರು ಬೀಡು. 1 ರಿಂದ 6 ನೇ ಪ್ರತಿವಾದಿಯರ ವಂಶದ ಹೆಸರು ಪಾಪಸಾಣಿ. ಪಾಪಸಾಣಿ ತಿಪ್ಪನ್ನ ರವರ ಅಕ್ಕ ಸುಬ್ಬಕ್ಕ ಎಂದರೆ ಸರಿಯಲ್ಲ.

2. ಸದರಿ ಸ. ನಂ. ನಲ್ಲಿ 1/3 ಭಾಗ ಪಾಪಸಾಣಿ ಬಯ್ಯಣ್ಣ ರವರಿಗೆ ಸೇರಿತ್ತು ಎಂದರೆ ಸುಳ್ಳು. ಪಾಪಸಾಣಿ ಬಯ್ಯಣ್ಣ ರವರ ಆಸ್ತಿ 5 ಭಾಗಗಳಾಗಿವೆ ಎಂದರೆ ಸರಿ. ಪಾಪಸಾಣಿ ತಿಪ್ಪನ್ನ, ಪಾಪಸಾಣಿ ಲಕ್ಷ್ಮನ್ನ, ಪಾಪಸಾಣಿ ಗಂಗುಲಪ್ಪ, ಪಾಪಸಾಣಿ ಸುಬ್ಬಕ್ಕ ತಲಾ 1/5 ಭಾಗ ಇದೆ ಎಂದರೆ ಸರಿ. 5 ಭಾಗದಲ್ಲಿ 3 ಭಾಗವನ್ನು ಸುಬ್ಬಕ್ಕನಿಗೆ, 1 ಭಾಗ ತಿಪ್ಪನ್ನ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

3. 70 ವರ್ಷಗಳ ಹಿಂದೆ ಮೌಖಿಕ ವಿಭಾಗದ ಅಡಿ ಪಾಪಸಾಣಿ ಸುಬ್ಬಕ್ಕ ಮತ್ತು ಪಾಪಸಾಣಿ ತಿಪ್ಪನ್ನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅಸಲುದಾವೆ ಸಂಖ್ಯೆ 17/1986 ಅನ್ನು ಗಂಗಮ್ಮ, ಈಶ್ವರರೆಡ್ಡಿ ಮತ್ತು ರಾಜಲಕ್ಷ್ಮೀ ರವರು ಬಯಣ್ಣ ರವರ ಮಕ್ಕಳ ವಿರುದ್ಧ ದಾವೆ ದಾಖಲಿಸಿದ್ದಾರೆ ಎಂದರೆ ಸರಿ. ಆ ದಾವೆಯನ್ನು ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದ್ದಾರೆ ಎಂದರೆ ದಾವಾ ಸ್ವತ್ತು ಅದರಲ್ಲಿ ಇಲ್ಲ.

4. ಆ ದಾವೆಯಲ್ಲಿ ದಾವಾ ಸ್ವತ್ತು ಪಾಪಸಾಣಿ ತಿಪ್ಪನ್ನ ನ ಭಾಗಕ್ಕೆ ಬಂದಿದೆ ಎಂದರೆ ಸುಳ್ಳು. ಸ.ನಂ. 45/1 ರಲ್ಲಿ 9 ವರೆ ಗುಂಟೆ ತಿಪ್ಪನ್ನನಿಗೆ ಉಳಿಗೆ ಸ್ವತ್ತು ಗಂಗಂಮ್ಮನಿಗೆ ಬಂದಿದೆ ಎಂದರೆ ಸುಳ್ಳು. ಅಸಲುದಾವೆ ಸಂಖ್ಯೆ 17/1986 ರ ದಾಖಲಿಸಿದ ಬಗ್ಗೆ 2018 ರಲ್ಲಿ ನನಗೆ ಗೊತ್ತಿದೆ.

ದಾವಾ ಸ್ವತ್ತಿನ ಮೇಲೆ ಸಾಲ ಪಡೆದಿಲ್ಲ.  ಬೇರೆ ಆಸ್ತಿಗಳ ಮೇಲೂ ಸಾಲ ಪಡೆದಿಲ್ಲ. 2018 ರಲ್ಲಿ ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ಅಡ್ಡ ಪಡಿಸಿದ್ದು, ತಹಶೀಲ್ದಾರ್ ಕಛೇರಿಯಲ್ಲಿ ಕೇಸ್ ದಾಖಲಿಸಿ ನಂತರ ಈ ದಾವೆ ದಾಖಲಿಸಿದ್ದೇನೆ. ತಹಶೀಲ್ದಾರ್ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇದೆ.

5. 2018 ಕ್ಕೂ ಮೊದಲು ಅಸಲುದಾವೆ ಸಂಖ್ಯೆ 17/1986 ರ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡು 14 ವರ್ಷಗಳು ಆಗಿದೆ. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳು ಈಗ ನನ್ನ ಹೆಸರಿನಲ್ಲಿವೆ. 2 ವರ್ಷಗಳ ಖಾತೆ ನನ್ನ ಹೆಸರಿಗೆ ಆಗಿದೆ. ಎಲ್ಲಾ ಆಸ್ತಿಗಳು ನನ್ನ ಮತ್ತು 1 ನೇ ವಾದಿಯ ಹೆಸರಿಗೆ ಜಂಟಿ ಇವೆ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ಬೀಡು ಮದ್ದನ್ನ ನ ಹೆಸರಿಗೆ ಮತ್ತು ನನ್ನ ತಂದೆಯ ಹೆಸರಿಗೆ ಆಸ್ತಿಗಳು ಜಂಟಿ ಇದ್ದವು ಎಂದರೆ ಸರಿ.

6. 1986 ರಿಂದ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಖಾತೆ ಮೊದಲು ತಿಪ್ಪನ್ನ ಹೆಸರಿಗೆ ಇತ್ತು ಎಂದರೆ ಸರಿ. ತಿಪ್ಪನ್ನ ಮೃತ ಪಟ್ಟ ನಂತರ ಪ್ರತಿವಾದಿಗಳ ಹೆಸರಿಗೆ ಖಾತೆ ಆಗಬಾರದೆಂದು ನಾನು ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿ. ಚಿನ್ನ ಪಾಪಮ್ಮ ನ ಮಗ ಪಾಪಸಾಣಿ ವೆಂಕಟಿಗ ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪಾಪಸಾಣಿ ವಂಶಸ್ಥರಿಗೆ ಸೇರಿದ್ದು ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿ ಕಬಳಿಸಲು ದಾಖಲೆಗಳನ್ನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

7. ಪ್ರತಿವಾದಿಗಳ ಆಸ್ತಿಯನ್ನು ನನ್ನದು ಎಂದು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ःः ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ